# ಮತ್ತೆ ಬಣ್ಣದತ್ತ ಪ್ರೀತಿ ಸೆಳೆತ

‘ಅಭಿನಯ ಎಂದರೆ, ಸುಮ್ಮನೆ ಹೋಗಿ ನಟಿಸುವುದಲ್ಲ. ಒಮ್ಮೆ ನಟಿಸಲು ಪ್ರಾರಂಭಿಸಿದರೆ ನೀವು ನಿಮ್ಮನ್ನು ಸುರಕ್ಷಿತ ಖಾತೆಯ ಪೆಟ್ಟಿಗೆಯೊಳಗೆ ಇರಿಸಿಕೊಳ್ಳುವಿರಿ ಮತ್ತು ನೀವು ಇನ್ಯಾರೊ ಆಗುವಿರಿ’ – ನಟಿ ಪ್ರೀತಿ ಜಿಂಟಾ ಮತ್ತೆ ಬಣ್ಣಹಚ್ಚಲು ಗಂಭೀರವಾಗಿ ಚಿಂತನೆ ನಡೆಸಿದ್ದಾಳೆ ಎನ್ನುವುದಕ್ಕೆ ಪುಷ್ಟಿ ನೀಡುವಂತಿದೆ ಈ ಸಾಲುಗಳು. ಐಪಿಎಲ್ ಕ್ರಿಕೆಟ್ ತಂಡದ ಮಾಲೀಕತ್ವ ಪಡೆದಾಗಿನಿಂದ ಪ್ರೀತಿ ಚಿತ್ತ ಬಣ್ಣದ ಲೋಕದಿಂದ ಕ್ರೀಡಾ ಲೋಕದೆಡೆಗೆ ಹೆಚ್ಚು ಕೇಂದ್ರೀಕರಿಸಿದೆ. ಇನ್ನೇನು ಪ್ರೀತಿ ಸಂಪೂರ್ಣವಾಗಿ ಸಿನಿಮಾ ರಂಗದಿಂದ ದೂರವಾಗಿಯೇ ಬಿಡುತ್ತಾಳೆ ಎನ್ನುತ್ತಿರುವಾಗ, ಐಪಿಎಲ್‌ನಿಂದಲೇ ತುಸು ದೂರವಾಗುವ ಸೂಚನೆ ನೀಡಿದ್ದಾಳೆ ಆಕೆ. ಅದರರ್ಥ ಪಂಜಾಬ್ ಕಿಂಗ್ಸ್ ಇಲೆವೆನ್ ತಂಡದ ಸಹ ಮಾಲೀಕತ್ವವನ್ನೇನೂ ಅವರು ತೊರೆಯುತ್ತಿಲ್ಲ. ಆದರೆ, ಅದರ ಜತೆಗೇ ಸಿನಿಮಾರಂಗದತ್ತ ಹೆಚ್ಚು ಗಮನ ಹರಿಸಲು ಅವಳು ನಿರ್ಧರಿಸಿದ್ದಾಳೆ.

2013ರಲ್ಲಿ ‘ಇಷ್ಕ್ ಇನ್ ಪ್ಯಾರಿಸ್’ ನಿರ್ಮಿಸಿ, ನಟಿಸಿದ್ದ ಪ್ರೀತಿ ಮತ್ತೆ ಹಿರಿತೆರೆಯಲ್ಲಿ ಕಾಣಿಸಿಕೊಂಡಿಲ್ಲ. ಆ ಚಿತ್ರವೂ ಪ್ರೀತಿ ಪಾಲಿಗೆ ಸಿಹಿಯಾಗಿರಲಿಲ್ಲ. ಈಗ ಸಿನಿಮಾವೊಂದನ್ನು ಖಾತೆಗೆ ಸೇರಿಸಿಕೊಂಡಿರುವ ಪ್ರೀತಿ, ‘ನಚ್ ಬಲಿಯೇ’ ಡ್ಯಾನ್ಸ್ ರಿಯಾಲಿಟಿ ಷೋನ ತೀರ್ಪುಗಾರಿಕೆಗೂ ಕುಳಿತುಕೊಳ್ಳಲಿದ್ದಾಳೆ.

‘ಇಷ್ಟು ವರ್ಷ ಸಿನಿಮಾರಂಗದಲ್ಲಿ ಕಷ್ಟಗಳನ್ನು ಎದುರಿಸಿದ್ದೇನೆ. ಐಪಿಎಲ್‌ನಲ್ಲಿಯೂ ಎದುರಿಸಬೇಕಿತ್ತು. ಐಪಿಎಲ್ ಆಯ್ದುಕೊಂಡದ್ದಕ್ಕೆ ಸಂತಸವಿದೆ. ಆದರೆ ಸಿನಿಮಾದಲ್ಲಿಯೂ ಇನ್ನಷ್ಟು ಬೆಳೆಯಬೇಕಿದೆ’ ಎಂದು ಸಿನಿಮಾ ಮತ್ತು ಐಪಿಎಲ್ ಎರಡರ ನಡುವಿನ ಹೊಯ್ದಾಟವನ್ನು ಬಿಡಿಸಿಟ್ಟಿದ್ದಾಳೆ ಪ್ರೀತಿ. ಐಪಿಎಲ್‌ನ ಸಹವರ್ತಿ ನೆಸ್ ವಾಡಿಯಾ ವಿರುದ್ಧ ಕಿರುಕುಳದ ದೂರು ನೀಡಿದ್ದ ಪ್ರೀತಿ, ಮನಸ್ತಾಪ ತೊರೆದು ಆತನಿಗೆ ಮತ್ತೆ ಹತ್ತಿರವಾಗಿದ್ದಾಳೆ ಎನ್ನುವ ಸುದ್ದಿ. ತಾನು ‘ಒಳ್ಳೆಯ ವ್ಯಕ್ತಿ’ಯೊಂದಿಗೆ ನಂಟು ಹೊಂದಿರುವುದಾಗಿ ಹೇಳಿಕೊಳ್ಳುವ ಶಿಮ್ಲಾದ ಬೆಡಗಿ ಅದು ಯಾರೆಂದು ಸದ್ಯಕ್ಕೆ ಬಹಿರಂಗಪಡಿಸಲು ಮುಂದಾಗಿಲ್ಲ.





# ಕಂಗನಾ

## ಮೀನಾಕುಮಾರಿ ಆಗುವುದಿಲ್ಲ

ಹಿರಿಯ ನಟಿ ಮೀನಾಕುಮಾರಿ ಅವರ ಬದುಕನ್ನು ಸಿನಿಮಾ ರೂಪಕ್ಕಿಳಿಸಲು ಸಿದ್ಧತೆ ನಡೆಸಿದ್ದಾರೆ ಅವರ ಮಲಮಗ ತಾಜ್ದಾರ್ ಅಮ್ರೋಹಿ. ಈ ಸುದ್ದಿ ಹೊರಬಿದ್ದ ಬೆನ್ನಲ್ಲೇ ‘ಕ್ವೀನ್’ ಕಂಗನಾ ರನೌತ್ ಮೀನಾಕುಮಾರಿಯಾಗಿ ಕಾಣಿಸಿಕೊಳ್ಳಲಿದ್ದಾಳೆ ಎನ್ನುವ ಸುದ್ದಿ ಹುಟ್ಟಿಕೊಂಡಿತ್ತು. ಆದರೆ ಅಮ್ರೋಹಿ ಅದನ್ನು ನಿರಾಕರಿಸಿದ್ದಾರೆ.

ಬಿ ಟೌನ್ ಪಂಡಿತರಿಗೆ ಇದು ಆಘಾತದ ಸಂಗತಿ ಕೂಡ. ಏಕೆಂದರೆ ಸಾಲು ಸಾಲು ಹಿಟ್ ಚಿತ್ರಗಳನ್ನು ನೀಡುವುದರ ಜತೆಗೆ ಅಭಿನಯಕ್ಕೆ ರಾಷ್ಟ್ರಪ್ರಶಸ್ತಿಯನ್ನೂ ಪಡೆದ ಕಂಗನಾಳಿಗೆ ಇನ್ನು ಆಕೆಯೇ ಸಾಟಿ ಎಂದೇ ಎಲ್ಲರೂ ಮಾತನಾಡಿಕೊಂಡಿದ್ದರು. ಹೀಗಿರುವಾಗ ತನ್ನ ಚಿಕ್ಕಮ್ಮನ ಪಾತ್ರವನ್ನು ನಿರ್ವಹಿಸುವ ಸಾಮರ್ಥ್ಯ ಕಂಗನಾಳಿಗೆ ಇಲ್ಲ ಎಂದು ಅಮ್ರೋಹಿ ನೇರವಾಗಿ ಹೇಳಿರುವುದನ್ನು ಕೇಳಿ ಬಹಳಷ್ಟು ಮಂದಿ ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ. ಆದರೆ ತಮ್ಮ ಹೇಳಿಕೆಯನ್ನು ಅಮ್ರೋಹಿ ಸಮರ್ಥಿಸಿಕೊಳ್ಳುತ್ತಾರೆ. ‘ಕಂಗನಾ ಏನೇ ಆಗಿರಬಹುದು ಆದರೆ, ಮೀನಾಕುಮಾರಿ ಆಗಲಾರಳು. ನನ್ನ ಚಿಕ್ಕಮ್ಮ ತುಂಬಾ ಸಾಂಪ್ರದಾಯಿಕ ಹಾಗೂ ಗಟ್ಟಿ ವ್ಯಕ್ತಿತ್ವದವರು. ಕಂಗನಾ ಅದಕ್ಕೆ ಸಂಪೂರ್ಣ ತದ್ವಿರುದ್ಧ’ ಎಂದಿದ್ದಾರೆ ಅವರು. ಆಧುನಿಕತೆಯ ಛಾಯೆ ಹೊಂದಿರುವ ಕಂಗನಾ, ತಾಯಿಯ ಪಾತ್ರಕ್ಕೆ ನ್ಯಾಯ ಒದಗಿಸಲಾರಳು ಎನ್ನುವುದು ಅವರ ಅಭಿಪ್ರಾಯ. ಮೀನಾಕುಮಾರಿಯ ಬದುಕನ್ನು ತೆರೆದಿಡುವ ಈ ಚಿತ್ರದ ಹೆಸರು ‘ಮೀನಾಕಮಾಲ್’. ಈ ಚಿತ್ರದಲ್ಲಿ ಮೀನಾ ಕುಮಾರಿ ಅವರ ಬದುಕಿನ ಮೂರು ಘಟ್ಟಗಳನ್ನು ಮೂರು ಪಾತ್ರಗಳ ಮೂಲಕ ತೆರೆದಿಡಲಾಗುತ್ತಿದೆ. ಹೀಗಾಗಿ ಮೂವರು ನಟಿಯರು ಬೇರೆ ಬೇರೆ ಘಟ್ಟಗಳಲ್ಲಿ ಮೀನಾ ಕುಮಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಮೀನಾ ಕುಮಾರಿಯ ಪಾತ್ರದ ಕುರಿತು ಕಂಗನಾ ಕೂಡ ಒಮ್ಮೆ ಹೇಳಿಕೊಂಡಿದ್ದಳು. ಹೀಗಾಗಿ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ಕಂಗನಾರಿಗೇ ಈ ಪಾತ್ರ ಒಲಿಯುವುದು ನಿಶ್ಚಿತ ಎನ್ನಲಾಗಿತ್ತು. ಯಶಸ್ಸೊಂದೇ ಪಾತ್ರಕ್ಕೆ ಆಯ್ಕೆ ಮಾಡಿಕೊಳ್ಳುವ ಮಾನದಂಡವಾಗಲಾರದು ಎಂಬ ಸೂಚನೆ ನೀಡಿದ್ದಾರೆ ಅಮ್ರೋಹಿ.

■ ಅಮಿ